**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ದಿನಾಂಕ 19 ನೇ ಮಾಹೆ ಜೂನ್ 2023**

**<u>ಸಿ.ಸಿ. 275/2020</u>**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

ವಿರುದ್ಧ

ಆರೋಪಿ :2. ಮಾಳಮ್ಮ ಕೋಂ ಲೇಟ್ ಆಂಜನೇಯ.ಬಿ.ಸಿ
ವಯಸ್ಸು 65 ವರ್ಷ,
ವೃತ್ತಿಃ ವ್ಯವಸಾಯ,
ವಾಸಃ ಬೆಟ್ಟದಪುರ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ಆರೋಪಣೆ</u>**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್.ಎಲ್.ಬಿ,* ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ವಿರುದ್ದ ಮಾಡುವ ಆರೋಪಣೆ ಏನೆಂದರೆ,

ದಿನಾಂಕ 15.02.2020 ರಂದು ಬೆಳಿಗ್ಗೆ ಜಾವ 2.00 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು, ಚನ್ನಕೇಶವಪುರ ಗ್ರಾಮದ ಚಾಸಾ.3 ಪ್ರಿಯಾಂಕ ಕೆ. ಬಿ ರವರ ಜಮೀನಿನಲ್ಲಿ, 2 ನೇ ಆರೋಪಿತನ ಬಾಬ್ತು ಮಾಡೆಲ್ ನಂ. 415 DINST MAHINDRA SERPUNCH ಟ್ರಾಕ್ಟರ್ ನ್ನು 1 ನೇ ಆರೋಪಿತನು ಉಳುಮೆ ಮಾಡುತ್ತಿರುವಾಗ, ಟ್ರಾಕ್ಟರ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಗದ್ದೆಯ ಕೊಲ್ಲಿಯ ಕಡೆಗೆ ಅದು ತಲೆ ಕೆಳಗಾಗಿ ಮೊಗುಚಿ ಬಿದ್ದ ಕಾರಣ, 1 ನೇ ಆರೋಪಿತನು ಟ್ರಾಕ್ಟರ್ ಅಡಿಯಲ್ಲಿ ಸಿಲುಕಿಕೊಂಡು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಮತ್ತು 2 ನೇ ಆರೋಪಿಯಾದ ನೀವು 1 ನೇ ಆರೋಪಿಯಾದ ಮೃತ ಪ್ರವೀಣ ರವರಿಗೆ ಚಾಲನಾ ಪರವಾನಿಗೆ ಇಲ್ಲದಿದ್ದರೂ ಸಹ ಅವರಿಗೆ ಟ್ರಾಕ್ಟರ್ ನ್ನು ಚಾಲನೆ ಮಾಡಲು ನಿಮ್ಮ ಟ್ರಾಕ್ಟರ್ ನ್ನು ನೀಡಿರುತ್ತೀರಿ, ಆ ಮೂಲಕ 2 ನೇ ಆರೋಪಿಯಾದ ನೀವು **ಭಾರತೀಯ ಮೋಟಾರು ವಾಹನ ಕಾಯ್ದೆ 180 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

ಪ್ರಶ್ನೆ 1. ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿರುತ್ತದೆಯೇ?
ಉತ್ತರಃ ತಿಳಿಯಿತು.

ಪ್ರಶ್ನೆಃ 2. ಈಗ ಓದಿ ಹೇಳಿದ ಆರೋಪಣೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯನ್ನು ಬಯಸುವಿರೋ?
ಉತ್ತರಃ

**(ಶ್ವೇತ.ಜೆ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.